ನನ್ನ ಓದು

# ಸಾವಿನ ನೆರಳನ್ನು ಹಿಡಿಯುವ ಯತ್ನ!

## ಗೌರಿ

ಒಬ್ಬ ಕ್ರೈಸ್ತ ಪಾದ್ರಿ ಒಮ್ಮೆ ಹಡಗಿನಲ್ಲಿ ಪ್ರಯಾಣಿಸುತ್ತಿರುತ್ತಾನೆ. ಅಲ್ಲೇ ಸಮೀಪದ ದ್ವೀಪವೊಂದರಲ್ಲಿ ಮೂವರು ಸಾಧುಗಳು, ಮೋಕ್ಷಕ್ಕಾಗಿ ಪ್ರಾರ್ಥನೆ ಮಾಡುತ್ತಿದ್ದಾರೆ ಎಂಬ ಸಂಗತಿ ಅವನ ಕಿವಿಗೆ ಬೀಳುತ್ತದೆ. ಒಡನೆಯೇ ಅವನು ಹಡಗನ್ನು ಆ ದ್ವೀಪದ ಕಡೆಗೆ ತಿರುಗಿಸುವಂತೆ ಹೇಳಿ, ಆ ದ್ವೀಪಕ್ಕೆ ಹೋಗುತ್ತಾನೆ.

ಅಲ್ಲಿನ ಮೂವರು ಸಾಧುಗಳನ್ನು ಭೇಟಿಯಾಗಿ ಕೆಲವು ಪ್ರಶ್ನೆಗಳನ್ನು ಕೇಳುತ್ತಾನೆ.

'ನೀವು ದೇವರಿಗೆ ಹೇಗೆ ಸೇವೆ ಸಲ್ಲಿಸುತ್ತೀರಿ?'

'ದೇವರ ಸೇವೆ ಮಾಡುವುದು ಹೇಗೆ ಎಂದು ನಮಗೆ ಗೊತ್ತಿಲ್ಲ. ನಾವು ಒಬ್ಬರನ್ನೊಬ್ಬರು ಜತನದಿಂದ ನೋಡಿಕೊಳ್ಳುತ್ತೇವೆ, ಅಷ್ಟೆ' ಎಂದು ಒಬ್ಬ ಸಾಧು ಉತ್ತರಿಸುತ್ತಾನೆ.

'ಯಾವ ಪ್ರಾರ್ಥನೆ ಹೇಳುತ್ತೀರಿ?'

'ಹೇ ಪ್ರಭು, ನಿನ್ನಲ್ಲಿ ಮೂವರಿದ್ದಾರೆ, ನಾವೂ ಮೂವರಿದ್ದೇವೆ. ನಮ್ಮ ಮೇಲೆ ಕರುಣೆ ಇರಲಿ' ಎಂದು ಮತ್ತೊಬ್ಬ ಸಾಧು ತಮ್ಮ ಪ್ರಾರ್ಥನೆಯನ್ನು ಹೇಳುತ್ತಾನೆ.

ಆ ಮೂವರಿಗೂ ಕ್ರೈಸ್ತ ಧರ್ಮದ ತ್ರಿಮೂರ್ತಿಗಳ ಬಗ್ಗೆ ಏನೂ ಗೊತ್ತಿಲ್ಲವೆಂಬುದು ಪಾದ್ರಿಗೆ ಖಾತ್ರಿಯಾಗುತ್ತದೆ. ಅವನು ದಿನವಿಡೀ ಅವರ ಜೊತೆಗಿದ್ದು ಪ್ರಾರ್ಥನೆಗಳನ್ನು ಉರು ಹೊಡೆಸುತ್ತಾನೆ. ಸಂಜೆಯ ಹೊತ್ತಿಗೆ ಸಂತೃಪ್ತನಾಗಿ ಮರಳಿ ಹೋಗುತ್ತಾನೆ.

ರಾತ್ರಿಯ ಹೊತ್ತು, ಹಡಗು ಕತ್ತಲಲ್ಲಿ ಮುಂದಕ್ಕೆ ಸಾಗುತ್ತಿರುತ್ತದೆ. ಒಮ್ಮಿಂದೊಮ್ಮೆಲೇ ಸಮುದ್ರದಲ್ಲಿ ಎಲ್ಲೋ ದೂರದಿಂದ ಹೊಳೆಹೊಳೆಯುವ ಪ್ರಕಾಶವೊಂದು ತನ್ನತ್ತ ಬರುತ್ತಿರುವುದು ಪಾದ್ರಿಗೆ ಕಾಣಿಸುತ್ತದೆ. ಆ ಬೆಳಕು ಕ್ರಮೇಣ ಹಡಗನ್ನು ಸಮೀಪಿಸತೊಡಗುತ್ತದೆ. ಕೈ ಕೈ ಹಿಡಿದುಕೊಂಡ ಮೂವರು ಸಾಧುಗಳು ಆ ಅಲೌಕಿಕ ಪ್ರಭೆಯಲ್ಲಿ ಮಿನುಗುತ್ತಾ ನೀರಿನ ಮೇಲೆ ತೇಲಾಡಿಕೊಂಡು ಬರುತ್ತಿರುವುದನ್ನು ಕಂಡು ಪಾದ್ರಿಗೆ ದಿಗ್ಭ್ರಮೆಯಾಗುತ್ತದೆ.

ಹಡಗನ್ನು ಸಮೀಪಿಸದ ಮೂವರು ಒಂದೇ ಧ್ವನಿಯಲ್ಲಿ ಹೀಗೆನ್ನುತ್ತಾರೆ: 'ನೀವು ಕಲಿಸಿದ್ದನ್ನೆಲ್ಲ ನಾವು ಮರೆತು ಬಿಟ್ಟಿದ್ದೇವೆ. ದಯವಿಟ್ಟು ಮತ್ತೊಮ್ಮೆ ಹೇಳಿಕೊಡಿ!'.

ಪಾದ್ರಿಗೆ ಒಮ್ಮೆಲೇ ನಾಚಿಕೆಯಾಗಿಬಿಡುತ್ತದೆ. ಅವರೆದುರು ಯಾಚಕನಂತೆ ಕೈ ಮುಗಿದು ನಿಂತು, 'ನಿಮಗೆ ಏನಾದರೂ ಹೇಳಿಕೊಡುವ ಯೋಗ್ಯತೆ ನನಗಿಲ್ಲ. ನೀವು ಹೇಗೆ ಪ್ರಾರ್ಥಿಸಿದರೂ ಅದು ದೇವರನ್ನು ತಲುಪಿಯೇ ತಲುಪುತ್ತದೆ' ಎಂದು ಕ್ಷಮೆ ಕೇಳುತ್ತಾನೆ.

* * *

ಟಾಲ್‌ಸ್ಟಾಯ್ ಬರೆದ 'ದ ಥ್ರೀ ಹರ್ಮಿಟ್ಸ್' ಕಥೆಯ ಈ ಸಾರರೂಪವನ್ನು ಆಶುತೋಷ್